# ಲೋಕವಿಸ್ಮೃತಿಯೊಂದರ ಕಥನ

ವಸುಂಧರಾ ಕದಲೂರು
ಕಲೆ: ಭಾವು ಪತ್ತಾರ್

ಭೀಮಸೇನ ಮನದನ್ನೆಯ ಇಚ್ಛೆಯಂತೆ, ಸೌಗಂಧಿಕಾ ಪುಷ್ಪ ತರಲು ಹೋದ ಅಲ್ಪ ಸಮಯದಲ್ಲೇ ದ್ರೌಪದಿಗೆ ಒಂಟಿಯಾಗಿ ವನವಿಹಾರ ಮಾಡಲು ಬೇಸರವಾಗಿ, ಹೊಂಗೆ ಮರದ ತಂಪಿನಲಿ ಹಾಸಿದ್ದ ಹುಲ್ಲುಹಾಸಿನ ಮೇಲೆ ಕುಳಿತು, ಕೆಲವೇ ಕ್ಷಣಗಳ ಹಿಂದೆ ಭೀಮನೊಂದಿಗೆ ನಡೆದ ಸಲ್ಲಾಪದ ಮಾತು ನೆನೆದು ಪುಳಕಗೊಂಡಳು.

ಅರ್ಜುನನನ್ನು ಮಾತ್ರ ವರಿಸಲು ಬಂದ ತನ್ನನ್ನು ಪಂಚಪಾಂಡವರು ವರಿಸುವಂತೆ ಮಾಡಿದ ಅತ್ತೆಯ ದೂರದೃಷ್ಟಿಯ ಚಾಣಾಕ್ಯ ಬುದ್ಧಿಯನ್ನು ಪ್ರಶಂಸಿಸಿಕೊಳ್ಳುತ್ತಾ ಭವಿಷ್ಯದಲ್ಲಿ ತಾನೂ ಹೀಗೆ ಮಾಡಬಹುದೆ? ಎಂದು ಚಿಂತಿಸಿ, ‘ಕೂಸಿಗೆ ಮುಂಚೆ ಕುಲಾವಿಯ ಕನಸು’ ಅಂತಿರಲಿ, ಗಂಡುಮಕ್ಕಳನ್ನು ಹಡೆಯುವ ಮುನ್ನವೇ ಸೊಸೆಯ ಕನಸು ಕಾಣುತ್ತಿರುವ ತನ್ನ ಬಗೆಗೆ ತಾನೇ ಬೆರಗಾಗಿ ನಕ್ಕಳು. ಸ್ವಪ್ನಲೋಕದಲಿ

